# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 67(ಹಳೆಯ ಸಂಖ್ಯೆ-19), ಸಂಜಯನಗರ. ಬೆಂಗಳೂರು.**

ಸಂಖ್ಯೆ: ಸ.ಅ/ವಾ-67(ಹಳೆಯ ಸಂಖ್ಯೆ-19)/ಪಿ.ಆರ್/ /2022-23 ದಿನಾಂಕ:-09-01-2023

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:**-ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ:-09-01-2023 ರಂದು ವಾರ್ಡ್ ಸಂ: 67 (ಹಳೆಯ ಸಂಖ್ಯೆ-19) ಸಂಜಯನಗರ ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಷರಾ |
|---|---|---|---|
| 1. | ಶ್ರೀಮತಿ. ಜ್ಯೋತಿ.ಜಿ ಚೌಳೂಲ್ಕರ್ ಸ.ಕಾ.ನಿ (ಘ.ತ್ಯಾ.ನಿ) ಪುಲಿಕೇಶಿ ನಗರ ವಿಭಾಗ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | |
| 2. | ಶ್ರೀ. ನವನಾಥ್ | ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾರ್ಡ್ ನಂ:67(ಹಳೆಯ ಸಂಖ್ಯೆ-19) | |
| 3. | ಶ್ರೀ.ಗಣೇಶ್ | ಕಿರಿಯ ಆರೋಗ್ಯ ಪರಿವೀಕ್ಷಕರು. | |
| 4. | ಸಂಚಾರಿ ಪೊಲೀಸ್ ಅಧಿಕಾರಿಗಳು | ಸಂಚಾರಿ ಪೊಲೀಸ್ ಠಾಣೆ, ಆರ್.ಟಿ ನಗರ. | |
| 5. | ಶ್ರೀಮತಿ ಶಾಕೀರುನ್ನೀಸಾ | ಬಿ.ಡಬ್ಲ್ಯೂ.ಎಸ್.ಎಸ್.ಬಿ | |
| 6. | ಬೀದಿ ದೀಪ ನಿರ್ವಾಹಕರು | Street light Incharge, B B M P. | |
| 7. | ಶ್ರೀ. ಆರ್.ಪಿ.ರಾವ್,ಆರ್.ಎ.ಹುದ್ದಾರ್ ಮತ್ತು ಇತರರು | ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು | |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ.ನವನಾಥ್, ಸಹಾಯಕ ಅಭಿಯಂತರರು ರವರು ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀಮತಿ ಜ್ಯೋತಿ.ಜಿ ಚೋಳೂಲ್ಕರ್ ರವರಿಗೆ ಮತ್ತು ಸಭೆಯಲ್ಲಿ ಸೇರಿದ ಸಾರ್ವಜನಿಕರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**ಘನತ್ಯಾಜ್ಯ ನಿರ್ವಹಣೆ:-**

1. ಸಂಜಯನಗರ ಮುಖ್ಯ ರಸ್ತೆಯ ನಾಗಶೆಟ್ಟಹಳ್ಳಿ ಬಸ್ ಸ್ಟಾಪ್ ಹತ್ತಿರ ಖಾಲಿ ಇರುವ ಬಿ.ಡಿ.ಎ ಜಾಗವು ಬ್ಲಾಕ್‌ಸ್ಪಾಟ್ (ಕಸ ಎಸೆಯುವ ಸ್ಥಳ) ಆಗಿ ಪರಿವರ್ತನೆಯಾಗುತ್ತಿರುವ ಬಗ್ಗೆ ಸಾರ್ವಜನಿಕರು ತಿಳಿಸಿದರು.
2. ಬೈರಪ್ಪ ಲೇಔಟ್‌ನ 4ನೇ ಕ್ರಾಸ್, ಶನಿಮಹಾತ್ಮ ದೇವಸ್ಥಾನದ ಹಿಂದುಗಡೆ ಇರುವ ಖಾಲಿ ಜಾಗದ ಹತ್ತಿರ ಹಾಗೂ ಸಂಜಯನಗರ ಪೊಲೀಸ್ ಠಾಣೆ ಎದುರುಗಡೆ ಟ್ರಾನ್ಸ್‌ಫಾರ್ಮರ್ ಹತ್ತಿರ ಪಾದಚಾರಿ ಮಾರ್ಗದಲ್ಲಿ ಜನರು ಕಸವನ್ನು ಎಸೆಯುತ್ತಿರುತ್ತಾರೆ. ಸದರಿ ಸ್ಥಳದಲ್ಲಿನ ಕಸವನ್ನು ತೆಗೆಯಬೇಕಾಗಿ ಸಾರ್ವಜನಿಕರು ತಿಳಿಸಿದರು.

ಸದರಿ ವಿಷಯಗಳ ಬಗ್ಗೆ ಗಮನ ಹರಿಸಿ ಬಗೆ ಹರಿಸಬೇಕಾಗಿ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು

**ಬೀದಿ ದೀಪಗಳ ನಿರ್ವಹಣೆ:-**

1. ವಾರ್ಡ್‌ನ 60 ಅಡಿ ರಸ್ತೆ ಕೆ.ಹೆಚ್.ಮುನಿಯಪ್ಪ ರವರ ಮನೆಯ ಎದುರುಗಡೆ, ಸೆಂಟ್ರಲ್ ಎಕ್ಸೈಜ್ ಲೇಔಟ್‌ನ 2ನೇ ಮುಖ್ಯರಸ್ತೆ, ಮತ್ತು 4ನೇ ಕ್ರಾಸ್‌ನ ಜಂಕ್ಷನ್, 9ನೇ ಕ್ರಾಸ್ ಮತ್ತು ರಾಘವೇಂದ್ರಸ್ವಾಮಿ ದೇವಸ್ಥಾನದ ಹತ್ತಿರವಿರುವ ಪಾರ್ಕ್‌ನಲ್ಲಿ ಬೀದಿದೀಪವು ಉರಿಯುತ್ತಿಲ್ಲವೆಂದು, ಸಾರ್ವಜನಿಕರು ತಿಳಿಸಿದರು.

ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಿಸಿದಂತೆ ಸಭೆಗೆ ಗೈರು ಹಾಜರಾಗುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಹಾಜರಾಗಬೇಕಾಗಿ ಸಾರ್ವಜನಿಕರು ಕೋರಿದರು. ನೋಡಲ್

Scanned with CamScanner

ಅಧಿಕಾರಿಗಳು ಬೀದಿ ದೀಪಗಳ ನಿರ್ವಹಣೆಯ ಅಧಿಕಾರಿಗಳು ಸಭೆಗೆ ಹಾಜರಾಗಲೂ ತಿಳಿಸುವಂತೆ ವಾರ್ಡ್‌ನ ಸಹಾಯಕ ಅಭಿಯಂತರರಿಗೆ ತಿಳಿಸಿದರು ಹಾಗೂ ಮೇಲಿನ ಸಮಸ್ಯೆಗಳನ್ನು ಬಗೆಹರಿಸಲು ತಿಳಿಸುವಂತೆ ಸಹಾಯಕ ಅಭಿಯಂತರರು ಬಿ.ಬಿ.ಎಂ.ಪಿ ರವರಿಗೆ ತಿಳಿಸಿದರು

**ಬೃಹತ್ ನೀರು ಕಾಲುವೆ:-**

1. ವಾರ್ಡ್‌ನಲ್ಲಿ ಹಾದು ಹೋಗುತ್ತಿರುವ ಬೃಹತ್ ನೀರು ಗಾಲುವೆಯಲ್ಲಿ ಅನಧಿಕೃತವಾಗಿ ಕೇಬಲ್‌ಗಳನ್ನು ಹಾಕಲಾಗಿದ್ದು, ಸದರಿ ಕೇಬಲ್‌ಗಳನ್ನು ತೆರವುಗೊಳಿಸಲು ಬೃಹತ್ ಮಳೆ ನೀರು ಕಾಲುವೆ ನಿರ್ವಹಣೆ ಮಾಡುವ ಅಧಿಕಾರಿಗಳು ತಿಳಿಸಲು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು.

**ಆರೋಗ್ಯ ಇಲಾಖೆ:-**

1. ಭೂಪಸಂದ್ರ ಬಡಾವಣೆ ರಾಮಮಂದಿರದ ಹತ್ತಿರ, ಬೈರಪ್ಪ ಲೇಔಟ್ 4ನೇ ಅಡ್ಡರಸ್ತೆ ಹಾಗೂ ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ಹಾಗೂ ಸಂಜಯನಗರ ವಾರ್ಡ್ ವ್ಯಾಪ್ತಿಯಲ್ಲಿ ಸೊಳ್ಳೆ ನಿಯಂತ್ರಣ ಔಷಧಿಯನ್ನು ಸಿಂಪಡಿಸಲು ಸಾರ್ವಜನಿಕರು ಕೋರಿದರು.

**ಕಾಮಗಾರಿ ಇಲಾಖೆ:-**

1. ನಾಗಶೆಟ್ಟಿಹಳ್ಳಿಯ 3ನೇ ಮುಖ್ಯರಸ್ತೆಯು ತುಂಬಾ ಹಾಳಾಗಿದ್ದು, ರಸ್ತೆಯನ್ನು ಹೊಸದಾಗಿ ಡಾಂಬರೀಕರಣ ಮಾಡಿಕೊಡಬೇಕಾಗಿ ಸಾರ್ವಜನಿಕರು ಕೋರಿದರು.

ಮೇಲ್ಕಂಡ ವಿಷಯಗಳ ಬಗ್ಗೆ ಗಮನಹರಿಸಿ ಬಗೆಹರಿಸಬೇಕಾಗಿ ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಅಭಿಯಂತರರಿಗೆ ತಿಳಿಸಿದರು.

**ಉದ್ಯಾನವನ:-**

1. ವಾರ್ಡ್‌ನ ವಿವಿಧ ಲೇಔಟ್‌ಗಳಲ್ಲಿ ಬರುವ ಪಾರ್ಕ್‌ಗಳಲ್ಲಿ ಅಳವಡಿಸಿರುವ ಮಕ್ಕಳ ಆಟದ ಸಾಮಾಗ್ರಿಗಳನ್ನು ಮತ್ತು ಜಿಮ್ ಉಪಕರಣಗಳನ್ನು ಸರಿಪಡಿಸಲು ಸಾರ್ವಜನಿಕರು ಕೋರಿದರು.

**ಅರಣ್ಯ ಇಲಾಖೆ:-**

1. ಇಲ್ಲಿಯವರೆಗೂ ಯಾವುದೇ ಸಭೆಗೂ ಅರಣ್ಯಾಧಿಕಾರಿಗಳು ಹಾಜರಾಗದಿರುವ ಬಗ್ಗೆ ನೋಡಲ್ ಅಧಿಕಾರಿಗಳು ವಿಷಾದ ವ್ಯಕ್ತ ಪಡಿಸಿದರು. ಮತ್ತು ಸದರಿ ಅಧಿಕಾರಿಗಳಿಗೆ ವಾರ್ಡ್ ಸಭೆಗೆ ಹಾಜರಾಗಲು ಪತ್ರ ಮುಖಾಂತರ ತಿಳಿಸಲು ನೋಡಲ್ ಅಧಿಕಾರಿಗಳು ಸೂಚಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)
2. ವಾರ್ಡ್‌ನಲ್ಲಿ ಬರುವ ವಿನಾಯಕ ಲೇಔಟ್, ಆರ್.ಎಂ.ಎಸ್ ಲೇಔಟ್ ಮತ್ತು ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ಜೋತುಬಿದ್ದಿರುವ ಮರದ ಕೊಂಬೆಗಳನ್ನು ಕತ್ತರಿಸಲು ಅರಣ್ಯಾಧಿಕಾರಿಗಳಿಗೆ ಸೂಚಿಸುವಂತೆ ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಅಭಿಯಂತರರಿಗೆ ತಿಳಿಸಿದರು. ಅರಣ್ಯ ಇಲಾಖೆಯ ಅಧಿಕಾರಿಗಳು ಸಭೆಗೆ ಹಾಜರಾಗದಿರುವ ಬಗ್ಗೆ ವಿಷಾದ ವ್ಯಕ್ತ ಪಡಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಿರುವಂತೆ ಸೂಚಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)

**ಬಿ.ಡಬ್ಲ್ಯೂ.ಎಸ್.ಎಸ್.ಬಿ:-**

1. ವಾರ್ಡ್‌ನ ಸೆಂಟ್ರಲ್ ಎಕ್ಸೈಜ್ ಲೇಔಟ್‌ನ 1ನೇ ಎ ಕ್ರಾಸ್, 1ನೇ ಮುಖ್ಯರಸ್ತೆ, ವಿನಾಯಕ ಬಡಾವಣೆಯಲ್ಲಿ ಮ್ಯಾನ್‌ಹೋಲ್‌ಗಳು ಸಿಂಕ್ ಆಗಿರುವ ಬಗ್ಗೆ ಸಾರ್ವಜನಿಕರು ತಿಳಿಸಿದರು. ಸದರಿ ಮ್ಯಾನ್‌ಹೋಲ್‌ಗಳನ್ನು ಸರಿಪಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರವರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು.
2. ವಾರ್ಡ್‌ನ ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ಕುಡಿಯುವ ನೀರು ಸಮರ್ಪಕವಾಗಿ ಬರುತ್ತಿಲ್ಲವೆಂದು ಸಾರ್ವಜನಿಕರು ತಿಳಿಸಿದರು.
3. ಎನ್.ಜಿ.ಇ.ಎಫ್ ಲೇಔಟ್‌ನ 1ನೇ ಮತ್ತು 2ನೇ ಮುಖ್ಯರಸ್ತೆಯಲ್ಲಿ ನೀರು ಬರುತ್ತಿಲ್ಲವಾಗಿ ಸಾರ್ವಜನಿಕರು ತಿಳಿಸಿದರು.
4. ಭೂಪಸಂದ್ರ ಬಡಾವಣೆಯ ವಿದ್ಯಾಸಾಗರ ಶಾಲೆಯ ಎದುರುಗಡೆ ರಸ್ತೆಯಲ್ಲಿ ಹೊಸದಾಗಿ ಒಳಚರಂಡಿಗಳನ್ನು ಅಳವಡಿಸಲಾಗಿದ್ದು, ಸದರಿ ರಸ್ತೆಯಲ್ಲಿ ಓಡಾಡಲು ತೊಂದರೆಯುಂಟಾಗುತ್ತಿದ್ದು, ವೆಟ್‌ಮಿಕ್ಸ್ ಹಾಕಿಕೊಡಬೇಕಾಗಿ ಸಾರ್ವಜನಿಕರು ಕೋರಿದರು.

ಸದರಿ ವಿಷಯಗಳ ಬಗ್ಗೆ ಗಮನಹರಿಸಿ ಸರಿಪಡಿಸಬೇಕಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

**ಟ್ರಾಫಿಕ್ ಮತ್ತು ಕಾನೂನು ಸುವ್ಯವಸ್ಥೆ:-**

1. ಭೂಪಸಂದ್ರ ಮುಖ್ಯರಸ್ತೆಯಲ್ಲಿ ವಿದ್ಯಾಸಾಗರ ಶಾಲೆಯ ಎದುರುಗಡೆ ಟ್ರಾಫಿಕ್ ಸಮಸ್ಯೆ ಬಗ್ಗೆ ಹಲವಾರು ಬಾರಿ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಲಾದರೂ ಸಮಸ್ಯೆ ಬಗೆಹರಿಯದ ಬಗ್ಗೆ ಸಾರ್ವಜನಿಕರು ಆಕ್ಷೇಪಿಸಿದರು.

Scanned with CamScanner

2. ವಾರ್ಡ್‌ನ ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ 1ನೇ ಎ ಕ್ರಾಸ್, 2ನೇ ಮುಖ್ಯರಸ್ತೆ, ರೇಣುಕಾ ಅಪಾರ್ಟ್‌ಮೆಂಟ್ ಹತ್ತಿರ ರೋಡ್ ಹಂಪ್ ನಿರ್ಮಾಣ ಮಾಡಿಕೊಡಬೇಕಾಗಿ ಸಾರ್ವಜನಿಕರು ಕೋರಿದರು.

ಸದರಿ ವಿಷಯಗಳ ಬಗ್ಗೆ ಟ್ರಾಫಿಕ್ ಮತ್ತು ಕಾನೂನು ಸುವ್ಯವಸ್ಥೆಯ ಪೊಲೀಸ್ ಅಧಿಕಾರಿಗಳು ಗಮನಹರಿಸಿ ಕ್ರಮ ಕೈಗೊಳ್ಳಬೇಕಾಗಿ ನೋಡಲ್ ಅಧಿಕಾರಿಗಳು ಸೂಚಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)

**ಬೆಸ್ಕಾಂ:-**

1. ವಾರ್ಡ್‌ನಲ್ಲಿ ಬೆಸ್ಕಾಂ ನಿಂದ ಯು.ಜಿ ಕೇಬಲ್ ಅಳವಡಿಸುತ್ತಿರುವ ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು, ಸದರಿ ಕಾಮಗಾರಿಯಿಂದ ನಿರ್ಮಾಣವಾದ ರಸ್ತೆ ಗುಂಡಿಗಳನ್ನು ಇನ್ನು ಕೆಲವು ಕಡೆ ಮುಚ್ಚಿಲ್ಲದಿರುವ ಬಗ್ಗೆ ಸಾರ್ವಜನಿಕರು ತಿಳಿಸಿದರು ಸದರಿ ವಿಷಯದ ಬಗ್ಗೆ ಗಮನಹರಿಸಿ ಬಾಕಿ ಇರುವ ಗುಂಡಿಗಳನ್ನು ಗುತ್ತಿಗೆದಾರರಿಂದ ಮುಚ್ಚಿಸಬೇಕೆಂದು ಬೆಸ್ಕಾಂ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)

ವಾರ್ಡ್‌ನ ಅಧ್ಯಕ್ಷರು ಮಾತನಾಡುತ್ತಾ ಈ ಮೇಲಿನ ಎಲ್ಲಾ ಅಂಶಗಳನ್ನು ಕೂಡಲೇ ಬಗೆಹರಿಸುವಂತೆ ವಾರ್ಡ್ ಕಾರ್ಯದರ್ಶಿಗಳಿಗೆ ತಿಳಿಸುತ್ತಾ ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರಿಗೆ ವಂದನೆಗಳನ್ನು ತಿಳಿಸುತ್ತಾ ಈ ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸದಸ್ಯ ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್-67(ಹಳೆಯ ಸಂಖ್ಯೆ-19),
ಸಂಜಯನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್-67(ಹಳೆಯ ಸಂಖ್ಯೆ-19),
ಸಂಜಯನಗರ

**<u>ಪ್ರತಿಯನ್ನು:-</u>**

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ

Scanned with CamScanner